SRI M. VEERAPPA MOILY.—Mr. Speaker Sir, we are very anxious to provide mini buses for the tourists. Now we are running a small truck. That is not at all sufficient for such a huge potential as we have in Bijapur. We have already procured mini buses and we are introducing them during the first week of August, 1981 in Bijapur.

SRI S.H.S. BHAKSHI.—Sir, I don't know why this world famous tourist centre has been neglected so far and why sufficient transport arrangements have not been made for the visiting tourists. Why this step-motherly treatment is there in respect of Bijapur district ?

SRI M. VEERAPPA MOILY.—Sir, I don't know why it has been neglected. Anyway, in our regime we will see that Bijapur district, as a whole, is projected in the tourist map of not only our country but also the international tourism. We would also like to implement many other programmes which I have answered in replay to other questions. I would also see that these mini buses are put under the dynamic leadership of Mr. Bhakshi and in his presence only we will see that it is completed.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ಮಿನಿ ಬಸ್ ಓಡಾಡುವ ವ್ಯವಸ್ಥೆಯನ್ನು ಮುಂದಿನ ತಿಂಗಳಿಂದ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಬೇಲೂರು, ಹಳೇಬೀಡು, ಹಾಸನ ಮುಂತಾದ ಮುಖ್ಯವಾದ ಐತಿಹಾಸಿಕ ಪ್ರಸಿದ್ಧವಾದ ಸ್ಥಳಗಳಿಗೆ ನೇರವಾಗಿ ಬಸ್ ನಡೆಸುತ್ತೀರಾ. ಬೆಂಗಳೂರಿನಿಂದ ಬಿಜಾಪುರ, ಐಹೊಳೆ, ಪಟ್ಟದಕಲ್, ಬಾದಾಮಿ ಮುಂತಾದ ಸ್ಥಳಗಳಿಗೆ ನೇರವಾಗಿ ಪ್ರವಾಸ ಅಭಿವೃದ್ಧಿ ನಿಗಮದಿಂದ ಬಸ್ ಓಡಿಸುವ ವ್ಯವಸ್ಥೆಯನ್ನು ಮಾಡುತ್ತೀರಾ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದನ್ನು ಪರಿಶೀಲನೆ ಮಾಡೋಣ. ಈಗ ನಾವು ಟ್ರಾವಲ್ ಸರ್ಕೂಟ್ ಸಿಸ್ಟಂ ಅನ್ನು ಇಂಟ್ರಡ್ಯೂಸ್ ಮಾಡುತ್ತಾ ಇದ್ದೇವೆ. ನಾರ್ತ್ ಕರ್ನಾಟಕ ಒಂದು ರೀಜನ್ ಆಗಿ, ಸೌತ್ ಕರ್ನಾಟಕ ಮತ್ತೊಂದು ರೀಜನ್ ಆಗಿ ನಾವು ಈ ಸರ್ಕೂಟ್ ಕಾನ್ಸೆಪ್ಟನ್ನು ಪ್ರಯೋಗ ಮಾಡಿದಾಗ ಈ ಬಸ್‌ಗಳನ್ನು ಹೆಚ್ಚು ಉಪಯೋಗ ಮಾಡಲಿಕ್ಕೆ ಬರುತ್ತದೆ. ಅದು ಆದ ಮೇಲೆ ಹೆಚ್ಚು ಬಸ್‌ಗಳು ಅಗತ್ಯವಿದ್ದರೆ ಇದನ್ನೂ ಕೂಡ ಮಾಡಲಿಕ್ಕೆ ಬರುತ್ತದೆ.'

Financial Assistance from World Bank for Improvement of Sericulture.

565 SRI H. L. THIMME GOWDA (Basavanagudi).—Will the Minister for Finance and Tourism be pleased to state :...

(a) name of the Universities and the amount paid to each of them from the World Bank Assistance for improvement of Sericulture;

(b) whether the purpose for which the amount given to them is achieved;

(c) if so, the nature and quantum of progress done by the Universities so far ?

SRI M. VEERAPPA MOILY (Minister for Finance and Tourism).—

(a) The financial outlay for research in Sericulture to the three Universities under Karnataka Sericultural Project is as follows :—

		(Rs. in lakhs)
(i) Bangalore University	...	Rs. 50.19
(ii) Mysore University	...	Rs. 13.57
(iii) University of Agricultural Sciences	...	Rs. 72.54

The amount released during the first year of the Project period is as follows : –

		(Rs. in lakhs)
(i) Bangalore University	...	Rs. 9.62
(ii) Mysore University	...	Rs. 3.82
(iii) University of Agricultural Sciences.	...	Rs. 11.34

(b) Yes.

(c) Civil Works and Recruitment of personnel is under progress in all these 3 Universities. The results of research would be available by the end of the project period.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು Whether the purpose for which the amount given to them is achieved ಎಂದು ಕೇಳಿದ್ದಕ್ಕೆ Yes ಎಂದು ಹೇಳಿದ್ದೀರಿ. ಯಾವ ಯಾವ ಪರ್ಪಸ್‌ಗೆ ಕೊಟ್ಟಿದೆ ಎಂದು ಹೇಳುತ್ತೀರಾ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ೧೩.೫೭ ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದೀರಿ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ೭೨.೫೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೋಸ್ಕರ ಈ ದುಡ್ಡನ್ನು ಕೊಟ್ಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈ ಹಣವನ್ನು ಮತ್ತು ಕೆಲವು ಯೋಜನೆ ಗಳನ್ನು ವಿಶ್ವವಿದ್ಯಾನಿಲಯಗಳು ಕಂಪ್ಲೀಟ್ ಮಾಡಿದೆ. Establishment of mulberry gardens, construction of buildings, sinking of borewells and commissioning of the same, recruitment of personnel, on research activities, finalisation of syllabus for various categories of training, procurement of equipments, training of inservice candidates of University of Agricultural Sciences and Postgraduate diploma course in Sericulture for 30 candidates in Bangalore University has been commenced.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಯಾವ ಉದ್ದೇಶಕ್ಕಾಗಿ ವಿಶ್ವಬ್ಯಾಂಕಿನಿಂದ ಆರ್ಥಿಕ ಸಹಾಯ ಹನ್ನು ಪಡೆಯ ಲಾಯಿತೋ ಆ ಉದ್ದೇಶಕ್ಕೆ ಆ ಹಣ ಉಪಯೋಗವಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಇವತ್ತು ನೀವು ಬರೀ ಅಲ್ಲಿ ಕಟ್ಟಡಕ್ಕೆ. ನೌಕರರ ಸಿಬ್ಬಂದಿ ವಿಚಿಗೆ ಹಣವನ್ನು ಉಪಯೋಗ ಮಾಡಿದರೆ ಅದರಿಂದ ರೀಸರ್ಚ್‌ಗೆ ಏನು ಉಪಯೋಗ ಮಾಡಿದ ಹಾಗಾಯಿತು ? ಇನ್ನು ಬೆಂಗಳೂರು ವಿಶ್ವವಿದ್ಯಾ

ನಿಲಯದಲ್ಲಿ ನಾನು ಸಿಂಡಿಕೇಟ್ ಸದಸ್ಯನಾಗಿದ್ದಾಗ ಈ ಪೋಸ್ಟ್ ಗ್ರಾಜುಯೇಟ್ ಕೋರ್ಸ್‌ನ್ನು ಶುರು ಮಾಡಿದ್ದೆವು, ಆದರೆ ಈ ರೀಸರ್ಚ್ ವರ್ಕ್ ಬೇರೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮತ್ತಿತರ ಕಡೆಗಳಲ್ಲಿ ಶುರುವಾಗಿದೆಯೋ ಇಲ್ಲವೋ ಗೊತ್ತಿಲ್ಲ ಎರಡು ಮೂರು ವಿಶ್ವವಿದ್ಯಾನಿಲಯಗಳಿಗೆ ಇದರ ಬಗ್ಗೆ ತಗಾದೆ ಮಾಡಿ ವಿಶ್ವಸಂಸ್ಥೆಯಿಂದ ಹಣವನ್ನು ತೆಗೆದುಕೊಂಡು ಬರಲಾಗಿದೆ ಅದನ್ನು ಸರಿಯಾಗಿ ರಿಸರ್ಚ್ ಗೋಸ್ಕರವೇ ಉಪಯೋಗಿಸುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ ಅಲ್ಲಿ ರಿಸರ್ಚ್ ವರ್ಕ್ ಸರಿಯಾಗಿ ನಡೆಯ ಬೇಕಾಗಿದ್ದರೆ ಅಲ್ಲಿಗೆ ಬೇಕಾದಂಥ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕಾಗುತ್ತದೆ. ಮತ್ತು ಅಲ್ಲಿ ಕಟ್ಟಡ ಸ್ಟಾಫ್‌ನ್ನು ಕೊಟ್ಟು ಸಜ್ಜುಗೊಳಿಸಬೇಕಾಗುತ್ತದೆ ಆದುದರಿಂದ ಅದಕ್ಕೆ ಬೇಕಾಗತಕ್ಕಂಥ ಪ್ರಾಮುಖ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಯಾವ ಉದ್ದೇಶದಿಂದ ಈ ಕಾರ್ಯಕ್ರಮ ಗಳನ್ನು ಹಾಕಿಕೊಂಡಿದ್ದೇವೋ ಆ ಉದ್ದೇಶಕ್ಕೆ ಅನುಗುಣವಾಗಿಯೇ ನಾವು ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವುದು.....

SRI M. C. BASAPPA.—Sir, there are two aspects here. One is giving of assistance to train students and the other is conducting research. May I know from the Hon. Minister whether any programme for research, as such, has been prepared by the University and submitted to the Government ?

SRI M. VEERAPPA MOILY.—Mr. Speaker Sir, we had identified 3 Universities, which we have already cited in the answer. Each University has been assigned certain activities *viz.*, Research and Training. Training is in terms of introducting different course and post-graduate courses. I have a big list of activities which are assigned to different universities. It is a lengthy list and if the hon. Member wants to see it, I can pass it on to him.

SRI M. C. BASAPPA.—Our intention is only to know whether any attempt has been made on the part of Universities.

SRI M. VEERAPPA MOILY.—Even, in a matter like eradication of 'Oozi fly' we have asked all the Universities to apply their mind and come out with research.

SRI PRABHAKAR R. TELKAR.—Sir, the Gulbarga Division is coming under sericulture programme. It is also reported that they are better than Kolar and Mysore. Therefore, I want to know whether any provision is made to Gulbarga University ?

SRI M. VEERAPPA MOILY.—When the world bank assistance came, at that time, Mangalore and Gulbarga Universities were not in existence. After sometime, Shimoga University or Sahyadri University may come into existence. We have to write to the World Bank to incorporate these two universities in their scheme. We will make our attempts to include these two universities in the World Bank Research Programme.

ಶ್ರೀ ಎಂ. ಮಳ್ಳೂರು ಆನಂದರಾವ್.—ನಮ್ಮ ರಾಜ್ಯದಲ್ಲಿ ರೇಷ್ಮೆ ಉದ್ದಿಮೆ ಸಾವು ಬದುಕಿನ ಹಂತದಲ್ಲಿದೆ. ಎಲ್ಲಾ ರೇಷ್ಮೆ ಬೆಳೆಯನ್ನು ಬೆಳೆಯತಕ್ಕಂಥವರು ಆ ಬೆಳೆಯನ್ನು ತೆಗೆದು ಹಾಕುತ್ತಿರುವಂಥ ಸಂದರ್ಭದಲ್ಲಿ ಅದನ್ನು ಉಳಿಸುವುದಕ್ಕೆ ತಾವು ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಇವತ್ತಿನ ದಿವಸ ವಿಶ್ವಬ್ಯಾಂಕಿನಿಂದ ೧ ಕೋಟಿ ೩೦ ಲಕ್ಷ ರೂ. ಗಳ ಹಣವನ್ನು ಪಡೆದು ಕೇವಲ ಅದರ ಬಗ್ಗೆ ರೀಸರ್ಚ್ ಮಾಡುವುದಕ್ಕೆ ಮತ್ತು ಕಟ್ಟಡ ಕಟ್ಟಿಸುವುದಕ್ಕೆ ಮತ್ತು ಸಿಬ್ಬಂದಿಗೋಸ್ಕರವಾಗಿ ಖರ್ಚು ಮಾಡುತ್ತಿದ್ದೀರಾ? ಆದುದರಿಂದ ಈ ರೇಷ್ಮೆ ಉದ್ದಿಮೆಗೂ ಮತ್ತು ವಿಶ್ವವಿದ್ಯಾನಿಲಯಗಳಿಗೂ ಏನು ಸಂಬಂಧವಿದೆ? ಏತಕ್ಕೆ ಅಷ್ಟು ದಂಡನ್ನು ಕೊಟ್ಟಿದ್ದೀರಿ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಶ್ರೀ ಮಳ್ಳೂರು ಆನಂದರಾವ್ ರವರು ರೇಷ್ಮೆ ಉದ್ದಿಮೆ ಸಾವಿನ ದವಡೆಯಲ್ಲಿ ಇದೆಯೆಂದು ಹೇಳಿದರು ಆದರೆ ಅದು ಬಹಳ ಚಿನ್ನಾಗಿದೆ. ಆದರೆ ಊಜಿ ಹಾವಳಿ ಬಂದಿದೆ...but we have already decided to live with it and sustian our industry. ನಾವು ಇಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮಳ್ಳೂರು ಆನಂದರಾಯರು ಸೈನ್ಸ್ ಸ್ಟೂಡೆಂಟ್ ಏನೋ ಗೊತ್ತಿಲ್ಲ. ಆದರೂ ಕೂಡ ನನಗೆ ಗೊತ್ತಿದ್ದ ಹಾಗೆ ಯೂನಿವರ್ಸಿಟಿಗಳಲ್ಲಿ ಹೊಸ ಕರುಕ್ಯುಲಂಗಳನ್ನು ಇಂಟರ್‌ಡ್ಯೂಜ್ ಮಾಡುವುದು ಇರುತ್ತದೆ.

Survey of Hydro Electric Plan in Coorg District.

687 SRI D. JAYADEVARAJ URS (Chamundeshwari).—Will the Minister of State for Power be pleased to state :—

(a) whether survey has been conducted on Burfa Stream water which flows towards western direction in Kodagu;

(b) if so, the estimated cost of this project?

SRI G. H. ASWATHA REDDY (Minister of State for Power).—

(a) There is no river by name Burfa in Kodagu District. The river called Baraphole is flowing. Survey is being conducted in this river to generate electricity.

(b) Detailed estimated cost has not so far been prepared. The approximate cost is about Rs. 120 crores. (Rupees one hundred and twenty crores).

ಶ್ರೀ ಡಿ. ಜಯದೇವರಾಜ್ ಅರಸ್.—ಸ್ವಾಮಿ ಡಿಟೇಲ್ ಎಸ್ಟಿಮೇಟ್ ಯಾವಾಗ ಮಾಡುತ್ತೀರಿ? ಮತ್ತು ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿ ಆದರಿಂದ ಉತ್ಪಾದನೆಯಾಗುತ್ತದೆಂಬುದನ್ನು ತಿಳಿಸುತ್ತೀರಾ?

ಶ್ರೀ ಜಿ. ಎಚ್. ಅಶ್ವತ್ಥ್ ರೆಡ್ಡಿ.—ಅಧ್ಯಕ್ಷರೇ, ಇನ್‌ವೆಸ್ಟಿಗೇಷನ್ ಪೂರ್ಣಗೊಂಡಿಲ್ಲ, ಆದರೂ ಕೂಡ ಅಂದಾಜು ವೆಚ್ಚ ೧೨೦ ಕೋಟಿ ಎಂದು ಹೇಳಿದ್ದೇನೆ. ಈಗಿನ ವೆಚ್ಚ ಸುಮಾರು ೨೦೦ ಕೋಟಿ ಆಗುತ್ತದೆ. ಮತ್ತೆ ಆದರಿಂದ ೧೮೦ ಮೆಗಾವ್ಯಾಟ್ ಕರೆಂಟ್ ಬರುತ್ತದೆ.

ಶ್ರೀ ಡಿ. ಜಯದೇವರಾಜ್ ಅರಸ್.—ಹಾಗಿದ್ದ ಮೇಲೆ ತಾವು ಈ ಯೋಜನೆಯನ್ನು ಕೈಗೊಂಡರೆ ನಮ್ಮ ಕಾವೇರಿ ಬೇಸಿನ್‌ಗೂ ಸಾಕಷ್ಟು ನೀರು ಬರುತ್ತದೆ ಮತ್ತು ವಿದ್ಯುಚ್ಛಕ್ತಿ ಕೂಡ ಬರುವುದರಿಂದ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಾ?

ಶ್ರೀ ಜಿ ಎಚ್. ಅಶ್ವತ್ಥ್ ರೆಡ್ಡಿ.—ಅಧ್ಯಕ್ಷರೇ, ಈ ಬಾರಾಪೊಲೆ ನದಿ ಅಲ್ಲಿಂದ ಹರಿದು ಕೇರಳದ ಮುಖಾಂತರ ಅರಬ್ಬಿ ಸಮುದ್ರಕ್ಕೆ ಹೋಗಿ ಸೇರುತ್ತಿತ್ತು. ಆದುದರಿಂದ ಆ ರೀತಿ ಸಮುದ್ರಕ್ಕೆ ಹೋಗುವ ಬದಲು ಅದೇ ನೀರನ್ನು ತಿರುಗಿಸಿಕೊಂಡರೆ ೧೬ ಟಿ. ಎಂ. ಸಿ. ಎಫ್. ಟಿ. ಯಷ್ಟು ನೀರು